329

ಚಿತ್ರದುರ್ಗ ಡಿವಿಜ್.

ನೋಟಿಸ್.

ತಾರೀಖು 27ನೆ ಜನವರಿ 1904.

ಚಿತ್ರದುರ್ಗ ಡಿವೀಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ ಟ್ಯಾಸ್ಕ್ ವರ್ಕ್ಸರಿ ವೆಂಕಟರಾವು ಎಂಬುವರಿಗೆ ಸೇಲಂ-ಬಳ್ಳಾರಿ ರೋಡ್ ರಿಪೇರಿ ಮಾಡಿದ್ದರ ಬಾಬತು ಪಾವತಿ ಆಗಬೇಕಾಗಿರುವ ರೂಪಾಯಿ 10—12—1ಸ್ಯೆ ಬಾಕಿ ನಿಂತಿರುತ್ತೆ. ಈ ತಾರೀಖು ಲಾಗಾಯತು 3 ತಿಂಗಳೊಳಗಾಗಿ ಮೇಲ್ಕಂಡ ಟ್ಯಾಸ್ಕ್ ವರ್ಕ್ಸರ ಆಗಲಿ ಅಥವಾ ಅವರ ಸರಿಯಾದ ವಾರಸ್ದಾರರ ಆಗಲಿ ಚಿತ್ರದುರ್ಗ ಡಿವೀಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ರೂಬರೂಬು ಹಾಜರಾಗಿ ಹಣಾ ತೆಗದುಕೊಳ್ಳತಕ್ಕದ್ದು ತಪ್ಪಿದಲ್ಲಿ ಮೊಬಲಗು ಸರಕಾರಕ್ಕೆ ಜಮಾ ಮಾಡಿಕೊಳ್ಳಲ್ಪಡುತ್ತೆ.

ವೈ. ಶ್ರೀನಿವಾಸರಾವ್,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ನೋಟಿಸ್.

ತಾರೀಖು 3ನೆ ಫೆಬ್ರವರಿ 1904ನೆ ಇಸವಿ.

ಮೈಸೂರು ಗಾರ್ನವೆಂಟ್ 30—11—1903ನೆ ನಂಬರ್ದ 2029—30—L. F. 161—92ನೆ ನಂಬರು ಪ್ರೊಸಿಡಿಂಗ್ಸ್‌ನಲ್ಲಿ ಮಂಜೂರು ಮಾಡಿರುವ ಮೇರೆಗೆ ಮೈಸೂರು ಪಟ್ಟಣದಲ್ಲಿ ಮನೆಗಳ ಕಟ್ಟಡಗಳ ಮತ್ತು ಖಾಲಿ ಜಾಗಗಳಿಗೆ ಹಾಲಿ ದಾಖಲಾಗಿ ಇರತಕ್ಕ ಸಾಲೀಯಾನಾ ಬಾಡಿಗೆ ರಿವಾಜು ಆಳತೆ ಮತ್ತು ಕಂದಾಯವನ್ನು ಇಬ್ಬರು ಕಮಿಷನರುಗಳ ಸಹಾಯದೊಂದಿಗೆ ಮೈಸೂರು ಸಿಟಿ ಮ್ಯುನಿಸಿಪಲ್ ವೈಸ ಪ್ರಸಿಡೆಂಟರವರು ಇರೇಬಿಯಲ್ಲಿ ಕಾಣಿಸಿರುವ ವೊಹಲಾಗಳ ಪಕ್ಕದಲ್ಲಿ ನಮೂದಿಸಿರುವ ವಾರಗಳಲ್ಲಿ ರೀ ರಿವಿಜ್ಯಾಯನೆ ಪುನರ್ವಿಮರ್ಶೆ ಮಾಡಲು ಪ್ರಾರಂಭಿಸುತ್ತಾರಾದ್ದರಿಂದ ಮೈಸೂರು ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ 73ನೆ ಸೆಕ್ಷನ್ ಅನುಸರಿಸಿ ಸಮಸ್ತರಿಗೂ ಈ ಮೂಲಕ ತಿಳಿಯಪಡಿಸಿದೆ.

1. ಮಂಡಿವೊಹಲಾ 1904ನೆ ಮಾರ್ಚಿ 3ನೆ ಗುರುವಾರದ ಲಾಗಾಯಿತು ಈ ವೊಹಲಾ ಪೂರ್ತಿಯಾಗುವ ವರಿಗೆ ಎಲ್ಲಾ ಗುರುವಾರಗಳಲ್ಲಿಯೂ
2. ನಜರುಬಾದುವೊಹಲಾ 1904ನೆ ಮಾರ್ಚಿ 4ನೆ ಶುಕ್ರವಾರದ ಲಾಗಾಯಿತು ಈ ವೊಹಲಾ ಪೂರ್ತಿಯಾಗುವ ವರಿಗೆ ಎಲ್ಲಾ ಶುಕ್ರವಾರಗಳಲ್ಲಿಯೂ.
3. ದೇವರಾಜವೊಹಲಾ 1904ನೆ ಮಾರ್ಚಿ 5ನೆ ಶನಿವಾರದ ಲಾಗಾಯಿತು ಡಿಟೋ
4. ಕೋಟೆ ವೊಹಲಾ 1904ನೆ ಮಾರ್ಚಿ 6ನೆ ಭಾನುವಾರದ ಲಾಗಾಯಿತು ಡಿಟೋ
5. ಲಷ್ಕರ್‌ವೊಹಲಾ 1904ನೆ ಮಾರ್ಚಿ 8ನೆ ಮಂಗಳವಾರದ ಲಾಗಾಯಿತು ಡಿಟೋ
6. ಕೃಷ್ಣರಾಜವೊಹಲಾ
7. ಚಾಮರಾಜವೊಹಲಾ

} 1904ನೆ ಮಾರ್ಚಿ 9ನೆ ಬುಧವಾರದ ಲಾಗಾಯಿತು ಈ ವೊಹಲಾ ಪೂರ್ತಿಯಾಗುವ ವರಿಗೆ ಎಲ್ಲಾ ಶುಕ್ರವಾರಗಳಲ್ಲಿಯೂ.

2. ವೊಹಲವರ್ಸಾ ಕಂದಾಯಗಳು ಅಂದರೆ-ಅಂಗಡಿ ಗಾಣಾ ಮತ್ತು ಗಾಡಿಗಳಮೇಲಿನ ಕಂದಾಯವನ್ನು ಲೇಟ್ ಚೀಫ್ ಕಮಿಷನರ್ ಸಾಹೇಬರವರ 28—9—1860ನೆ ಮುಕ್ತಂ 265ನೆ ನಂಬರು ಆಫೀಸಿಯಲ್ ಮಿನೋರಾಂಡಂನಲ್ಲಿ ನಮೂದಿರುವ ತಪಶೀಲು ಮೇರೆಗೆ ರೀ ರಿವಿಜ್ಯಾಯನೆ ಪುನರ್ವಿಮರ್ಶೆ ಮಾಡಲ್ಪಡುವದು.

ಕೆ. ಶ್ರೀನಿವಾಸರಾವ್,
ವೈಸ ಪ್ರೆಸಿಡೆಂಟ್.